ವಿಷಯ :–ರಾಜಾಜಿನಗರದಲ್ಲಿ ಸಾರ್ವತ್ರಿಕ ಆಸ್ಪತ್ರೆಯನ್ನು ನಿರ್ಮಿಸುವುದು.

ಪ್ರ. 172 (56) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ರಾಜಾಜಿನಗರದ ಕ್ಷೇತ್ರದ ಸಾರ್ವಜನಿಕರು ಏರಿಯಾದಲ್ಲಿ ಸಾರ್ವಜನಿಕ ಆಸ್ಪತ್ರೆಯನ್ನು ಕಟ್ಟಲು ಸಂಬಂಧಪಟ್ಟ ಅಧಿಕಾರಿಗಳನ್ನು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ;

ಆ. ಮಾನ್ಯ ಸಚಿವರು ವಿಧಾನಸಭಾ ಸದಸ್ಯರೊಂದಿಗೆ ಆಸ್ಪತ್ರೆ ಕಟ್ಟಲು ಸ್ಥಳ ಪರಿಶೀಲನೆ ಮಾಡಿದ್ದಾರೆಯೇ ;

ಇ. ಹಾಗೂ ಸಾರ್ವಜನಿಕ ಆಸ್ಪತ್ರೆಯನ್ನು ಕಟ್ಟಲು ಸ್ಥಳವನ್ನು ನಿರ್ದಿಷ್ಟಪಡಿಸುವ ಸಲುವಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಮತ್ತು ಇತರೇ ಕೆಲಸಗಳನ್ನು ಆ ಸ್ಥಳದಲ್ಲಿ ತೆಗೆದುಕೊಂಡಿರುವ ಬಗ್ಗೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು) :—

ಅ. ಬಂದಿದೆ.

ಆ. ಸಚಿವರು ಸ್ಥಳ ಪರಿಶೀಲನೆ ಮಾಡಿದ್ದಾರೆ.

ಇ. ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಕೃಷ್ಣನ್.—ನನ್ನ ಎರಡನೆ ಪ್ರಶ್ನೆಯಲ್ಲಿ ಆಸ್ಪತ್ರೆ ಕಟ್ಟಲು ಸ್ಥಳ ಪರಿಶೀಲನೆ ಮಾಡಿದ್ದಾರೆಯೇ ಎಂಬುದಕ್ಕೆ ಉತ್ತರವಾಗಿ ಸಚಿವರು ಸ್ಥಳ ಪರಿಶೀಲನೆ ಮಾಡಿದ್ದಾರೆ. ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಮೂರನೆ ಪ್ರಶ್ನೆಗೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಏನಾದರೂ ಪ್ಲಾನ್ ಮತ್ತು ಎಸ್ಟಿಮೇಟ್ ಮಾಡಿಸಿದ್ದೀರಾ, ಯಾವಾಗ ಅಪ್ರೂವಲ್ ಕೊಡುತ್ತೀರಿ, ಈ ಬಗ್ಗೆ ವಿವರ ಹೇಳುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ರಾಜಾಜಿನಗರ ಕ್ಷೇತ್ರ ಸಾಮಾನ್ಯವಾಗಿ ಕಾರ್ಮಿಕರಿರುವ ಪ್ರದೇಶವಾಗಿರುವುದರಿಂದ ಅಲ್ಲಿ ಇ.ಎಸ್.ಐ. ಆಸ್ಪತ್ರೆ ಇದೆ. ಅದಕ್ಕೆ ಸಮೀಪವಾಗಿ ಮಲ್ಲೇಶ್ವರದಲ್ಲಿ ಕೆ.ಸಿ. ಜನರಲ್ ಹಾಸ್ಪಿಟಲ್ ಇದೆ. ಅಲ್ಲಿರುವ ನಾಗರೀಕರಿಗೆ ಸಧ್ಯಕ್ಕೆ ಎರಡು ಆಸ್ಪತ್ರೆಗಳಿರುವುದರಿಂದ ಮಹಾನಗರ ಯೋಜನೆಯಲ್ಲಿ ಹೊಸ ಆಸ್ಪತ್ರೆ ಕಟ್ಟಡ ಕಟ್ಟುವ ಕಾರ್ಯಕ್ರಮ ಸದ್ಯಕ್ಕಿಲ್ಲ. ಆದರೆ ಅಲ್ಲಿ ಆಸ್ಪತ್ರೆ ಆಗಬೇಕು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ. ಆಕಾರಣದಿಂದಲೇ ಪರಿಶೀಲನೆ ಮಾಡಲಾಗುತ್ತಿದೆ. ಎಂದು ಹೇಳಿದ್ದೇವೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ರಾಜಾಜಿನಗರದಲ್ಲಿ ಕಾರ್ಮಿಕರು ಹೆಚ್ಚಾಗಿದ್ದಾರೆ ಎಂದು ಹೇಳಿದರು. ಆದರೆ ಮಾನ್ಯ ಮಂತ್ರಿಗಳು ಹೇಳುವ ರೀತಿಯಲ್ಲಿ ಕಾರ್ಮಿಕರ ಪರ್ಸೆಂಟೇಜ್ ಇಲ್ಲ. ಇ.ಎಸ್.ಐ. ಆಸ್ಪತ್ರೆಯಲ್ಲಿ ಕಾರ್ಮಿಕರು ಮಾತ್ರ ಹೋಗಲು ಅವಕಾಶವಿದೆಯೇ ಹೊರತು ಬೇರೆಯವರಿಗೆ ಅಲ್ಲಿ ಅವಕಾಶವಿಲ್ಲ. ಅದು ಬಿಟ್ಟರೆ ಕೆ.ಸಿ. ಜನರಲ್ ಆಸ್ಪತ್ರೆಗೆ ಹೋಗಬೇಕಾದರೆ ಮಲ್ಲೇಶ್ವರಕ್ಕೆ ಹೋಗಬೇಕು. ಅದು ಬಹಳ ದೂರವಾಗುತ್ತದೆ. ರಾಜಾಜಿನಗರ ಪ್ರದೇಶ ಬೃಹದಾಕಾರವಾಗಿ ಬೆಳೆಯುತ್ತಿರುವುದರಿಂದ ಆಸ್ಪತ್ರೆ ನಿರ್ಮಾಣದ ಬಗ್ಗೆ ಗಮನ ಹರಿಸುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಸಧ್ಯಕ್ಕೆ ಮಹಾನಗರ ಯೋಜನೆಯಲ್ಲಿ ಆ ವಿಷಯ ಇಲ್ಲ ಆಲ್ಲಿನ ಸಾರ್ವಜನಿಕರ ಒತ್ತಾಯವನ್ನು ಅರಿತು ಮುಂದಿನ ಮಹಾನಗರ ಸಭೆ ಆ ಕಡೆ ಯೋಚನೆ ಮಾಡಿದರೆ ಕೆಲಸ ತೆಗೆದುಕೊಳ್ಳಬಹುದು.

ವಿಷಯ :– ಶಿರಾತಾಲ್ಲೂಕಿನಲ್ಲಿ ಸಹಕಾರಿ ಸಾಲದ ಮರುಪಾವತಿಗೆ ನಿಗದಿಗೊಳಿಸಿ ಕಾಲಾವಧಿಯನ್ನು ವಿಸ್ತರಿಸುವುದು.

ಪ್ರ. 173(104) ಶ್ರೀ ಪಿ. ಮೂಡ್ಲೆಗೌಡ (ಶಿರಾ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ. ಶಿರಾ ತಾಲ್ಲೂಕಿನಲ್ಲಿ 30–6–83 ವರೆಗಿನ ಸಹಕಾರಿ ಸಾಲದ ವಸೂಲಾತಿ ಎಷ್ಟು ;

ಆ. ಇದರಿಂದ ರೈತರಿಗೆ ರಿಯಾಯಿತಿ ಆದ ಬಡ್ಡಿಯ ಮೊತ್ತವೆಷ್ಟು ;

ಇ. ಪಾಲಿ ಕಟ್ಟದೆ ಉಳಿದಿರುವ ರೈತರೆಷ್ಟು ಕಡು ಬಡವರಾಗಿದ್ದು ಸಾಲ ತೀರಿಸಲು ಅಶಕ್ತರಾದ ಪ್ರಯುಕ್ತ ಈ ರಿಯಾಯಿತಿಯನ್ನು ಮುಂದಿನ ಸುಗ್ಗಿಯವರೆಗೆ ಮುಂದುವರಿಸುವ ಬಗ್ಗೆ ಸರ್ಕಾರದ ನಿಲುವೇನು ?

ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು) :—

ಅ. ರೂ. 59.78 ಲಕ್ಷಗಳು.
ಆ. ರೂ. 27.56 ಲಕ್ಷಗಳು.
ಇ. ಹಾಲಿ ಕಟ್ಟಡದ ಉಳಿದಿರುವ ರೈತರ ಸಂಖ್ಯೆ 7695 ರಿಯಾಯಿತಿಯನ್ನು ಮುಂದುವರಿಸುವ ಸಾಧ್ಯತೆ ಇಲ್ಲ.

ಶ್ರೀ ಮೂಡ್ಲೆಗೌಡ.--ಸರ್ಕಾರ ರೈತರ ಬಗ್ಗೆ ಉದಾರವಾದ ರಿಯಾಯಿತಿಯನ್ನು ತೋರಿಸಿದೆ. ಸದ್ಯದ ಪರಿಸ್ಥಿತಿಯಲ್ಲಿ ಉಳಿದಿರತಕ್ಕ ರೈತರು ಕಡುಬಡವರಾಗಿದ್ದಾರೆ; ತುಂಬಾ ತೊಂದರೆಯನ್ನನುಭವಿಸುತಿದ್ದಾರೆ. ಆದ್ದರಿಂದ ದಯವಿಟ್ಟು ಪುನರ್‌ಪರಿಶೀಲನೆ ಮಾಡಿ ರಿಯಾಯಿತಿಯನ್ನು ಡಿಸೆಂಬರ್‌ವರೆಗೆ ಮುಂದುವರಿಸುವುದಕ್ಕೆ ಸಾಧ್ಯವಿದೆಯೇ ?

ಅಧ್ಯಕ್ಷರು.—'ಇಲ್ಲ' ಎಂದು ಹೇಳುತ್ತಾರೆ.

ಶ್ರೀ ಕೆ.ಎಸ್. ಕಾಳಮರಿಗೌಡ.—ಇರುವಂತೆ ಮಾಡಬೇಕು,

ಶ್ರೀ ಆರ್.ಎಲ್. ಜಾಲಪ್ಪ.—ಬಾಕಿ ಉಳಸಿಕೊಂಡಿರುವವರ ಪಟ್ಟಿಯನ್ನು ಬೇಕಾದರೆ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ ಅವರೆಲ್ಲಾ ಬಡವರಲ್ಲ. ಇದನ್ನು ಮುಂದುವರೆಸುವುದಕ್ಕಾಗುವುದಿಲ್ಲವೆಂದು ನಾಲ್ಕಾರು ಸಾರಿ ಹೇಳಿದ್ದೇವೆ. ಕಾರಣದಾದರೂ ಇಷ್ಟೆ; ಇದಕ್ಕೆ ನಮಗೆ ಹಣಕಾಸು ಕೊಡುವುದಕ್ಕೆ ನಬಾರ್ಡ್ ಸಂಸ್ಥೆಯವರು ಒಪ್ಪುತ್ತಿಲ್ಲ. ನಾವು ಕೊಟ್ಟಿರುವ ರಿಯಾಯಿತಿಯನ್ನು ಕೂಡ ಪೂರ್ತಿಯಾಗಿ ಅವರು ಒಪ್ಪಿಲ್ಲ. ಅವರ ಕಟ್ಟುಪಾಡು ಮೀರಿ ರಿಯಾಯಿತಿ ಕೊಟ್ಟರೆ ನಮ್ಮ ರಾಜ್ಯಕ್ಕೆ ಹಣ ಬರುವುದಕ್ಕೇ ಸಾಧ್ಯವಾಗುವುದಿಲ್ಲ. ಆದ್ದರಿಂದ ಮುಂದುವರೆಸುವ ಯೋಚನೆ ಇಟ್ಟುಕೊಂಡಿಲ್ಲ.

ಶ್ರೀ ರೆಡ್ಡಿ.--ಹಿಂದುಳಿದ ತಾಲ್ಲೂಕುಗಳೆಂದು ಪ್ರಕಟಣೆ ಮಾಡಿರುವ ಕಡೆಗಳಲ್ಲಿ ಮಾರ್ಚ್‌ವರೆಗೆ ಬೆಳೆ ಬರದಿರುವುದರಿಂದ ರೈತರು ಸಾಲ ಮಾಡಿ ಬೆಳೆ ಮಾಡಬೇಕಾಗಿದೆ. ಅಂಥ ತಾಲ್ಲೂಕುಗಳಲ್ಲಿಯೂ ದರೂ ರಿಯಾಯಿತಿಯನ್ನು ಮುಂದುವರೆಸುತ್ತೀರಾ ?

ಅಧ್ಯಕ್ಷರು.—ಇಲ್ಲ ಎಂದು ಹೇಳಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ.--ಸಣ್ಣ ರೈತರಿಗೆ ಬೆಳೆ ಬರುವವರೆಗೆ ಸಾಲ ವಸೂಲು ಮಾಡುವುದಕ್ಕೆ ಕ್ರಮ ಕೈಗೊಳ್ಳುವುದಿಲ್ಲ. ಆದರೆ ಮಿಕ್ಕವರಿಗೆ ವಸೂಲು ಮಾಡಲು ಕ್ರಮ ಕೈಗೊಳ್ಳದಿದ್ದರೆ ಬ್ಯಾಂಕ್ ನಡೆಯುವುದಿಲ್ಲ.

ಶ್ರೀ ಎಂ. ಮಹದೇವ್.--ಅಸಲು ಮತ್ತು ಬಡ್ಡಿ ಎರಡನ್ನೂ ಕಟ್ಟುವುದಕ್ಕಾಗದೇ ಇರುವ ರೈತರು ಅನೇಕರಿದ್ದಾರೆ. ಈ ರೀತಿ ಕಷ್ಟಕ್ಕೆ ಸಿಕ್ಕಿರುವ ರೈತರಿಗೆ ಕನ್‌ವರ್ಷನ್ ಮಾಡಿ ಸಾಲ ಎಂದು ಪರಿಗಣಿಸಿ ಅನುಕೂಲ ಮಾಡಿಕೊಡುತ್ತೀರಾ ?

ಶ್ರೀ ಆರ್.ಎಲ್. ಜಾಲಪ್ಪ.—ಈ ವರ್ಷ ಎಲ್ಲೆಲ್ಲಿ ಕ್ಷಾಮ ಪೀಡಿತ ಪ್ರದೇಶವೆಂದು ಘೋಷಣೆ ಮಾಡಲಾಗಿತ್ತೋ ಮತ್ತು ಕಾನೂನು ಪ್ರಕಾರ ಯಾರು ಯಾರಿಗೆ ಕನ್‌ವರ್ಟ್ ಮಾಡಲು ಅವಕಾಶವಿತ್ತೋ ಅಂಥ ಕಡೆಗಳಲ್ಲಿ ಮೂರು ವರ್ಷದ ಸಾಲವನ್ನಾಗಿ ಬದಲಾವಣೆ ಮಾಡಿದ್ದೇವೆ.

ವಿಷಯ :—ಮೊಳಕಾಲ್ಮೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು

ಪ್ರ. 174(158) ಶ್ರೀ ಎಸ್. ಜಿ. ನಾಯಕ್ (ಮೊಳಕಾಲ್ಮೂರು).--ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :--

ಅ. ಮೊಳಕಾಲ್ಮೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜಿನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ರಂಗಯ್ಯನ ದುರ್ಗ ಜಲಾಶಯದಿಂದ ನೀರನ್ನು ಒದಗಿಸಲು ನಗರಾಭಿವೃದ್ಧಿ ಯೋಜನೆಯಲ್ಲಿ 64 ಲಕ್ಷ ಮಂಜೂರು ಮಾಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಆ. ಹಾಗಿದ್ದಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ;

ಇ. ಮೊಳಕಾಲ್ಮೂರು ನಗರ ಪುರಸಭಾ ಮಂಡಲಿಯವರು ಹಣದ ಕೊರತೆಯಿಂದಾಗಿ ಜನತೆಗೆ ಕುಡಿಯುವ ನೀರನ್ನು ಸರಬರಾಜು ಮಾಡಲು ತೊಂದರೆಗೀಡಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

ಈ. ಹಾಗಿದ್ದಲ್ಲಿ ಸರಕಾರದವರು ತಾತ್ಕಾಲಿಕ ಆಧಾರದ ಮೇಲೆ ಮೊಳಕಾಲ್ಮೂರು ನಗರದ ಜನರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವ ಕಾರ್ಯಕ್ರಮಕ್ಕೆ ಸಾಕಾಗುವಷ್ಟು ಹಣವನ್ನು ಒದಗಿಸುತ್ತಾರೆಯೇ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು) :—

ಅ. "ಅಂದಾಜು ಪಟ್ಟಿ ಬಂದಿದೆ"